ಅಸಲು ದಾವಾ ನಂಃ 46/2022
ಪಿ ಡಬ್ಲ್ಯು: 1

<u>ದಿನಾಂಕಃ **15-12-2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದಃ</u>

ದಿನಾಂಕಃ13-04-2023 ರಂದು ನಿಪಿ 30 ರ ಪ್ರಕಾರ ಸರ್ಟಿಫಿಕೇಟನ್ನು ತೆಗೆದುಕೊಂಡಾಗ ನಾವು ನಮ್ಮ ತಾಯಿ ಇದ್ದಾರೋ ಇಲ್ಲವೋ ಹೇಳಿಲ್ಲ, ಅವರು ಮೊದಲು ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿ ಪಡೆದಿದ್ದೇವೆ. ವೈದ್ಯರು ನಮ್ಮ ಬಳಿ ಯಾವುದೇ ದಾಖಲಾತಿ ಕೇಳಿಲ್ಲ. ಆ ಸಮಯದಲ್ಲಿ ನಮ್ಮ ತಾಯಿ ಇದ್ದಾರೋ ಇಲ್ಲವೋ ವೈದ್ಯರು ಕೇಳಿಲ್ಲ, ನಾವು ಹೇಳಿಲ್ಲ. ನಾವು ವೈದ್ಯರಿಗೆ ನಮ್ಮ ತಾಯಿ ಈಗ ಇಲ್ಲ ಎಂದು ತಿಳಿಸಿಲ್ಲ. ಅವರ ಫೈಲ್ ನಲ್ಲಿ ಇದ್ದ ದಾಖಲಾತಿಗಳ ಪ್ರಕಾರ ಸರ್ಟಿಫಿಕೇಟ್ ಕೊಟ್ಟರು , ನಾನು ದಾಖಲಾತಿಗಳನ್ನು ನೋಡಿಲ್ಲ. ಯಾವ ದಿನಾಂಕದಿಂದ ಯಾವ ದಿನಾಂಕದ ವರೆಗೆ ನನ್ನ ತಾಯಿ ಚಿಕಿತ್ಸೆ ಪಡೆದುಕೊಂಡಿದ್ದರು ಆ ಬಗ್ಗೆ ನನ್ನ ಅಣ್ಣನಿಗೆ ತಿಳಿವಳಿಕೆ ನನಗೆ ತಿಳಿವಳಿಕೆ ಇಲ್ಲ, ನಾನು ವೈದ್ಯರಿಗೆ ವೈಯಕ್ತಿಕ ಮಾಹಿತಿ ಕೊಟ್ಟಿಲ್ಲ.

ನಿಪಿ 29 ರ ದಾಖಲಾತಿ ಪಡೆದುಕೊಳ್ಳುವಾಗಲೂ ಕೂಡ ನಾವು ನಮ್ಮ ತಾಯಿ ಜೀವಂತ ಇಲ್ಲ ಎಂಬ ಬಗ್ಗೆ ತಿಳಿಸಿಲ್ಲ, ಅವರು ಕೇಳಿಲ್ಲ, ನಾವು ಹೇಳಿಲ್ಲ. ನಮ್ಮ ತಾಯಿ ಬದುಕಿಲ್ಲ, ಸರ್ಟಿಫಿಕೇಟ್ ಕೊಡಿ ಎಂದು ಕೇಳಲು ತೊಂದರೆ ಇರಲಿಲ್ಲ. ನಿಪಿ 29 ರಲ್ಲಿ ನಮ್ಮ ತಾಯಿ ಯಾವ ದಿನಾಂಕದಿಂದ ಯಾವ ದಿನಾಂಕದ ವರೆಗೆ ಚಿಕಿತ್ಸೆ ಪಡೆದಿದ್ದಾರೆ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿಲ್ಲ, ಆದರೆ ಅವರ ಫೈಲ್ ನಲ್ಲಿ ಇದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಯಲ್ಲಿ ವೈದ್ಯರು ನಾನು ನನ್ನ ಬಳಿ ಇರುವ ದಾಖಲಾತಿಯನ್ನು ನೋಡಿ ಬರೆದಿದ್ದೇನೆ ಎಂದು ಬರೆದಿಲ್ಲ ಎಂದರೆ ಸರಿ . ನಿಪಿ 29 ಮತ್ತು 30 ವೈದ್ಯರ ಜೊತೆಗೆ ಶರೀಕಾಗಿ ಕೇಸಿಗೋಸ್ಕರ ಪಡೆದುಕೊಂಡಿರುವ ದಾಖಲಾತಿಗಳು ಎಂದರೆ ಸರಿಯಲ್ಲ.

ನಿಪಿ 19 ರ ದಾಖಲಾತಿಯಲ್ಲಿ ತೋರಿಸಿದ ಸಾಕ್ಷಿ ಸುಧಾಕರ್ ನಮಗೆ ಸಂಬಂಧಿಕರು ಎಂದರೆ ಸರಿ . ಇವರು ನಮ್ಮ ತಂದೆಯ ಸೋದರತ್ತೆಯ ಮಗ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತಮ್ಮ ತಾಯಿಯದ್ದು ಎಂದು ಗುರುತಿಸಿರುತ್ತಾರೆ. ಆದರೆ ಆ ದಾಖಲಾತಿ ಏನೆಂದು ತೋರಿಸಬೇಕು ಎಂದು ಕೇಳಿರುತ್ತಾರೆ. ಕಾರಣ ಅವರ ತಾಯಿಯ ಸಹಿಯನ್ನು ಮಾತ್ರ ನಿಡಿ2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸದರಿ ದಾಖಲಾತಿಯ 2 ನೇ ಪುಟದಲ್ಲಿರುವ ಅವರ ತಾಯಿಯ ಸಹಿಯನ್ನು ತೊರೀಸಲಾಗಿ ಸಾಕ್ಷಿ ಗುರುತಿಸಿರುವುದಿಲ್ಲ, ಸಾಕ್ಷಿ ಸದರಿ ದಾಖಲಾತಿಯನ್ನು ತೋರಿಸಿಲ್ಲ, ಕಾರಣ ಎರಡೂ ಸಹಿಗಳೂ ನಮ್ಮ ತಾಯಿಯದ್ದಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಸದರಿ ದಾಖಲಾತಿಯಲ್ಲಿರುವುವ ಅವರ ತಾಯಿ ಫೋಟೋ ಎಂದು ತೋರಿಸಲಾಗಿ ಸಾಕ್ಷಿ ಗುರುತಿಸಿರುವುದಿಲ್ಲ.

ದಿನಾಂಕಃ 26-08-2016 ರಂದು ನಮ್ಮ ತಾಯಿ ದಾವಾ ಶೆಡ್ಯೂಲ್ ಬಿ ಸ್ವತ್ತಿನ ಮನೆಯನ್ನು 4 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ನಮ್ಮ ತಾಯಿ ಸ್ವಂತ ಇಚ್ಚೆಯಿಂದ , ಸ್ವಬುದ್ದಿ , ಸ್ವಪ್ರೇರಣೆಯಿಂದ ಅವರ ಸ್ವತ್ತನ್ನು 4 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 26-08-2016 ರ ನಂತರ 4 ನೇ ಪ್ರತಿವಾದಿ ಆ ಸ್ವತ್ತನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ರೀತಿ ದಾನಪತ್ರ ಬರೆದಿರುವುದು ಗೊತ್ತಿದ್ದರೂ ಸಹ ನಾನು ಹಾಗೂ ಪ್ರತಿವಾದಿ1 ರಿಂದ 3 ಹಾಗೂ 5

ರಿಂದ 7 ರವರು 4 ನೇ ಪ್ರತಿವಾದಿ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಅದು ಸೃಷ್ಠಿ ಮಾಡಿದ ದಾಖಲಾತಿ ನಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾನ ಪತ್ರದ ಆಧಾರದ ಮೇಲೆ 4 ನೇ ಪ್ರತಿವಾದಿ ಸ್ವಾಧೀನ ಹಾಗೂ ಮಾಲೀಕತ್ವ ಹೊಂದಿದ್ದು ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಾಯಿ ಯಾವುದೇ ದಾನಪತ್ರ ಬರೆದುಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ದಾನಪತ್ರದಲ್ಲಿಯ ಉಳಿದ ಪುಟಗಳಲ್ಲಿರುವ ಸಹಿ ಕೂಡ ನನ್ನ ತಾಯಿಯ ಸಹಿ ಆಗಿದ್ದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನಾಗಲೀ 1 ರಿಂದ 3 ಹಾಗೂ 5 ರಿಂದ 7 ಪ್ರತಿವಾದಿಗಳು ಯಾವತ್ತೂ ತಾಯಿಯನ್ನು ನೋಡಿಕೊಂಡಿಲ್ಲ, ಹಾಗೂ ಅವರಿಗೆ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿ ಮೂಲ ಮನೆಯಲ್ಲಿ ಇದ್ದರು, 4 ನೇ ಪ್ರತಿವಾದಿಯ ಜೊತೆಗೆ ಇರಲಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಾಯಿ ಮೂಲ ಮನೆಯಲ್ಲಿದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ 27 ರಿಂದ 30 ಈ ಕೇಸಿಗೋಸ್ಕರ ಸೃಷ್ಠಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಇರುವಾಗ ಅವರ ಕೆಲಸಗಳನ್ನು ಅವರ ದಿನ ನಿತ್ಯದ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಬೇರೆಯವರ ಸಹಾಯ ಬೇಕಿತ್ತು ಎಂದು ನುಡಿದಿರುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಜಿ ಪಿ ಎ ಮಾಡಿಸಬೇಕು ಎಂದು ಹೇಳಿ ದಾನಪತ್ರ ಸೃಷ್ಠಿ ಮಾಡಿದದ್ದಾರೆ ಎಂದು ನುಡಿದಿರುತ್ತಾರೆ. ನಾವು ಪ್ರೌಢಿಮೆಗೆ ಬಂದ ನಂತರ ವಸಂತರವರನ್ನು ಹೊರತುಪಡಿಸಿ ಯಾರೂ ಕೂಡ ತಾಯಿಯನ್ನು ನೋಡಿಕೊಂಡಿಲ್ಲ ಎಂದರೆ ಸಾಕ್ಷಿ ವಸಂತರ ರವರನ್ನು ಬಿಟ್ಟು ಎಲ್ಲಾ ಮಕ್ಕಳು ತಾಯಿಯನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದು ನುಡಿದಿರುತ್ತಾರೆ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಃ 46/2022
ಪಿ ಡಬ್ಲ್ಯುಃ 1

<u>ಮರು ವಿಚಾರಣೆಃ ಇಲ್ಲ</u>ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,**
**ಸಂಚಾರಿ ನ್ಯಾಯಾಲಯ, ಕೊಪ್ಪ.**

ಸಾಕ್ಷಿದಾರರ ಸಹಿಃ